ಶಿವಕುಮಾರ ಪತ್ರಿಮಠ, ಶೋರಾಪೂರ

*ಭರವಸೆಗಳನ್ನೇ ನಂಬಿ ಬದುಕುವವರನ್ನು ಏನೆಂದು ಕರೆಯಬೇಕು?*



ಮತದಾರ.

ಎಂ.ಎಸ್. ಸೋಮಶೇಖರ್, ಮೈಸೂರು

*ಗಣಪತಿ ಮತ್ತು ಚಂದ್ರನದು ಯಾವ ರೀತಿಯ ಸಂಬಂಧ?*

ಅವನ ಹೊಟ್ಟೆಯೊಡೆದಾಗ ಇವನು ಅಯ್ಯೋ ಅನ್ನದೆ ನಕ್ಕದ್ದರಿಂದ ಪಾತ್ರಧಾರಿ, ವಿಮರ್ಶಕನ ಸಂಬಂಧ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಭ್ರಷ್ಟರನ್ನು ಗುಂಡಿಟ್ಟು ಕೊಂದರೆ ಭ್ರಷ್ಟಾಚಾರ ನಿರ್ಮೂಲನ ಆಗಿಬಿಡುತ್ತದೆಯೆ ರಾಂಜೀ?*

ಮದಗಜವನ್ನು ಗುಂಡಿಕ್ಕಿ ಕೊಲ್ಲುವುದು ಮೂರ್ಖತನ. ಮದ ಇಳಿಸಿ, ಪಳಗಿಸಿ ನಾವು ಹೇಳಿದಂತೆ ಸರ್ಕಸ್ ಮಾಡಿಸುವುದು ಜಾಣತನ.

ವಿದ್ಯಾ ಎಸ್. ಪೈ, ಕಾಸರಕೋಡ

*ಜೈಲಿಗೆ ಹೋದ ರಾಜಕಾರಣಿಗಳನ್ನೆಲ್ಲ ಒಂದುಗೂಡಿಸಿ ಒಂದು ಹೊಸ ಪಕ್ಷ ರಚಿಸಿದರೆ ಏನೆಂದು ಹೆಸರಿಡಬಹುದು?*



ಹರಾಮ್ ಆದ್ಮಿ ಪಾರ್ಟಿ!

ಎಸ್.ಜಿ. ಕರನಂದಿ, ವಿದ್ಯಾನಗರ

*ಮಕ್ಕಳು ಮನೆ ಬೆಳಗುತ್ತಾರೆ ಎಂಬುದಕ್ಕೆ ಉದಾಹರಣೆ ಯಾವುದು?*

ಅವರಿರುವ ಕಡೆಯೆಲ್ಲಾ ಕಂಪ್ಯೂಟರಿನದೋ, ಮೊಬೈಲಿನದೋ ಬೆಳಕು ಪಸರಿಸಿರುತ್ತದಲ್ಲ!

ಚೈತ್ರಾ ಕುಕ್ಕೆಮನೆ, ಬೆಂಗಳೂರು

*ಇಲ್ಲೊಬ್ಬ 'ಹೆಚ್ಚಿನ ಮಾಹಿತಿಗಾಗಿ' ಎಂದು ತನ್ನ ಮೊಬೈಲ್ ನಂಬರ್ ಕೊಡುತ್ತಿದ್ದಾನಲ್ಲಾ...?*

'ಹಿ' ಅಕ್ಷರ ಬಿಟ್ಟರೆ ಸರಿ!

ಟಿ.ಜೆ. ರಾಘವೇಂದ್ರ, ಮೈಸೂರು

*ನಲ್ವತ್ತರ ಸಚಿನ್ ನಿವೃತ್ತರಾದರೂ ಎಂಬತ್ತರ ರಾಜಕಾರಣಿಗಳು ನಿವೃತ್ತರಾಗಿಲ್ಲವೇಕೆ?*

ನಿವೃತ್ತಿ ಕ್ರಿಕೆಟ್ಟಾಟದವರಿಗೆ ಅನಿವಾರ್ಯ; ಕೆಟ್ಟಾಟದವರಿಗಲ್ಲ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಮದುವೆಯಾಗುವುದಕ್ಕೆ ಇಪ್ಪತ್ತೊಂದು ದಾಟಿರಬೇಕು; ಮಂತ್ರಿಯಾಗಬೇಕಾದರೆ?*

ಕೇವಲ ಎರಡನ್ನು ದಾಟಿದ್ದರೆ ಸಾಕು – ಸನ್ಮಾರ್ಗ, ಸಂಸ್ಕಾರ.

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಜಿಂಕೆ ಚರ್ಮಕ್ಕಿರುವ ಬೆಲೆ ಜೀವಂತ ಜಿಂಕೆಗೆ ಇರುವುದಿಲ್ಲವಲ್ಲಾ...?*

ನಿಜವೇ. ಜಿಂಕೆ ಅಪ್ಪ; ಜಿಂಕೆಯ ಚರ್ಮ ಅಪ್ಪನ ವಿಲ್!

ರತ್ನಾ ಅಶೋಕ ಗೊರವರ, ಧಾರವಾಡ

*ಆತ್ಮಸಾಕ್ಷಿ ಉಳ್ಳವರನ್ನು ಗುರುತಿಸುವುದು ಹೇಗೆ?*

ಬಹಳ ಸುಲಭ. ಗುಡಿಯಲ್ಲಿ ಗಲ್ಲ ತಟ್ಟಿಕೊಂಡೂ ತಟ್ಟಿಕೊಂಡೂ ಹುಂಡಿಗೆ ಕಾಣಿಕೆ ಹಾಕುವವರೆಲ್ಲಾ ಆತ್ಮಸಾಕ್ಷಿ ಉಳ್ಳವರೇ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ದೇವರು ಮನುಷ್ಯನನ್ನು ಏಕೆ ಸೃಷ್ಟಿಸಿದ?*

ದಿನವೂ ಈ ಪ್ರಶ್ನೆಯನ್ನೇ ದೇವನೂ ಕೇಳಿಕೊಂಡು ತನ್ನನ್ನು ತಾನೇ ಒದ್ದುಕೊಳ್ಳುತ್ತಿದ್ದಾನಂತೆ!

ಎನ್. ವಸಂತಾ, ಕತ್ತರಗುಪ್ಪ

*ಕೋಪಿಷ್ಟನಿಗೂ, ಪಾಪಿಷ್ಟನಿಗೂ ವ್ಯತ್ಯಾಸವುಂಟೆ ಅಣ್ಣಯ್ಯಾ?*

ಖಂಡಿತ ಇದೆ. ಕಾಲಕಳೆದಂತೆ ಕೋಪ ಇಳಿಯುತ್ತದೆ, ಪಾಪ ಹೆಚ್ಚುತ್ತದೆ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ನಾವು ಪೂಜಿಸುವ ದೇವರ ಹೆಸರಿನಲ್ಲೇಕೆ ಇನ್ನಿಯಲ್ಸ್ ಇರೋದಿಲ್ಲ ಸರ್?*

ಟೋಟಲ್ ಕಂಫ್ಯೂಷನ್ನೇ ಕಾರಣ. ಒಬ್ಬೊಬ್ಬ ದೇವನಿಗೆ ಸಹಸ್ರ ಸಹಸ್ರ ಹೆಸರುಗಳಿದ್ದರೆ ಏನಂತ ಇನ್ಶಿಯಲ್ಸ್ ಹಾಕೋದು ಹೇಳಿ!

## ಬಹುಮಾನಿತ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ

*ಗಂಡಸರು ಬೇಜಾರಾದರೆ ಗುಂಡು ಹಾಕುತ್ತಾರೆ. ಹೆಂಗಸರು ಬೇಜಾರಾದರೆ...?*

ಹೆಚ್ಚೇನೂ ವ್ಯತ್ಯಾಸವಿಲ್ಲ; ಗಂಡರು ಸಿಪ್ ಮಾಡುತ್ತಾರೆ. ಹೆಂಗಸರು ಗಾಸಿಪ್ ಮಾಡುತ್ತಾರೆ!

ಹೆಚ್.ಆರ್. ದಿವ್ಯಾರಾಣಿ, ಬಾಗೂರು

*ಪತಿ–ಪತ್ನಿ ಮತ್ತು ಗಂಡ–ಹೆಂಡತಿ ಈ ಜೋಡಿ ಪದಗಳಲ್ಲಿ ಯಾವುದರಲ್ಲಿ ಪ್ರೀತಿ ಬೆಸುಗೆ ಹತ್ತಿರವೆನಿಸುತ್ತದೆ?*

ಹೇಳಲಾಗದು! ಪತಿ ಎಂದರೆ ಕುತ್ತು, ಆಪತ್ತು, ಅಪಾಯ; ಪತಿಯ ಮಾತಿಗೆ ನಕಾರದ ಒತ್ತು ಕೊಟ್ಟರೆ ಪತ್ನಿ!

ಅಶ್ವಿನಿ ವಿ. ಹೆಗಡೆ, ಬೈರುಂಬೆ

*ಗೋಲ್ಡ್ ಲೋನ್‌ನಿಂದ ಬದುಕು ಬಂಗಾರವಾಗಲು ಸಾಧ್ಯವೆ?*

ಆಗಿಯೇ ಆಗುತ್ತದೆ– ಗಿರವಿ ಅಂಗಡಿಯವನದು!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ

*ಒಂದು ನಾಣ್ಯಕ್ಕೆ ಎರಡು ಮುಖ; ಒಂದು ಪ್ರಶ್ನೆಗೆ?*



ಒಂದೇ– ಉತ್ತರಮುಖ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಕನ್ನಡವೇ ನಮ್ಮಮ್ಮ, ಕನ್ನಡವೇ ನನ್ನುಸಿರು ಎನ್ನುವವರೇ ತಮ್ಮ ಮಕ್ಕಳನ್ನು ಕಾನ್ವೆಂಟಿಗೆ ಕಳುಹಿಸುವುದರ ರಹಸ್ಯ?*

ಉಸಿರಿಗೊಂದು ಪ್ರಾಣಾಯಾಮ ಕಲೆ, ಅಮ್ಮನಲ್ಲದೆ ಚಿಕ್ಕಮ್ಮ, ದೊಡ್ಡಮ್ಮನೊಡನೆಯೂ ಹೊಂದಿಕೊಳ್ಳುವ ಬುದ್ಧಿ ಕಲಿಸಲು!

ಕೆ.ಜಿ. ಚಂದ್ರಮೌಳಿ, ಮೈಸೂರು

*ಡಯಾಬಿಟಿಸ್ ಇರುವವರು ಹಣ್ಣಿನ ಅಧರಾಮೃತವನ್ನು ಸವಿಯಬಹುದೆ?*

ಎಚ್ಚರ! ಡಯಾಬಿಟಿಸ್ ಜೊತೆಗೆ ಬಿ.ಪಿ.ಯೂ ಏರೀತು!

■ ರಾಮ್